ರಿಹ್ಯಾಬಿಲಿಟೇಷನ್ ಮಾಡತಕ್ಕಂಥಾದ್ದು ಮತ್ತು ಅದರ ಬಗ್ಗೆ ಚಿಂತನೆ ಮಾಡಬೇಕಾಗಿರುವುದು ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಬರುತ್ತದೆ. ಅದರ ಎಕ್ಸಿಕ್ಯೂಷನ್ ಅಥವಾ ಉಸ್ತುವಾರಿ ನೋಡಿಕೊಳ್ಳುತಕ್ಕಂಥಾದ್ದು ಅಸಿಸ್ಟೆಂಟ್ ಕಮಿಷನರ್ ಮತ್ತು ರೆವಿನ್ಯೂ ಇಲಾಖೆಗೆ ಬರುತ್ತದೆ. ಒಂದು ವೇಳೆ ಇಂತಹ ಘಟನೆಗಳು ನಡೆದಿದೆ. ಎಂದು ಕಂಪ್ಲೇಂಟ್ ಎಂದರೆ, ಆಗ ಪೊಲೀಸ್‌ನವರು ಇಂಟರ್‌ಫಿಯರ್ ಆಗುತ್ತಾರೆ. ವಯಲೇಟ್ ಮಾಡಿದ್ದಾರೆ ಎಂದರೆ ಅದರ ಬಗ್ಗೆ ಕ್ರಮವನ್ನು ಬಾಂಡೆಡ್ ಲೇಬರ್ ಆಕ್ಟ್ ಕೆಳಗಡೆ ರೂರಲ್ ಡೆವಲಪ್‌ಮೆಂಟ್ ಆಗಲಿ ಅಥವಾ ರೆವಿನ್ಯೂ ಇಲಾಖೆಯಾಗಲಿ ಜರುಗಿಸಬಹುದು. ಆದರೆ ಇದು ಒಟ್ಟಾರೆ ಎರಡು ಮೂರು ಇಲಾಖೆ ಸೇರಿ ಉತ್ತರ ಕೊಡಬೇಕಾಗಿರುವುದರಿಂದ ನಾಳೆ ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ರೆವಿನ್ಯೂ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆ ಹಾಗೂ ವರದಿ ಇದರ ಬಗ್ಗೆ ಏನು ಇದೆ ಎಂಬುದನ್ನು ಕೇಳಿ ಹೇಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗಾಗಲೇ ಪೊಲೀಸ್ ಸ್ಟೇಷನ್‌ನಲ್ಲಿ ದಾಖಲೆ ಮಾಡಿದ್ದಾರೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ದಾಖಲೆ ಮಾಡಿದ ಮೇಲೆ ನಾವು ಬರುವುದು. ಅದಕ್ಕಿಂತ ಮುಂಚೆ ಪ್ರಶ್ನೆ ಉದ್ಭವಿಸುವುದಿಲ್ಲ. ತಾವು ಅಪ್ಪಣೆ ಕೊಟ್ಟರೆ ನಾಳೆ ಮೂರ್ನಾಲ್ಕು ಇಲಾಖೆಗೆ ಸಂಬಂಧಪಟ್ಟಂತೆ ವರದಿಯನ್ನು ಸಂಗ್ರಹಿಸಿ ಉತ್ತರ ಕೊಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಸದಾನಂದಗೌಡರು ಹಾಸನ ಜಿಲ್ಲೆಯಲ್ಲಿ ನೀರಾ ಚಳುವಳಿ ಕುರಿತಂತೆ ವಿಚಾರವನ್ನು ಎತ್ತಿದ್ದರು. ಅದಕ್ಕೆ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

(6) ಮಂತ್ರಿಗಳ ಹೇಳಿಕೆ

ಹಾಸನ ಜಿಲ್ಲೆಯಲ್ಲಿ ನೀರಾ ಚಳುವಳಿ ಕುರಿತು.

ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಕಾನೂನಿಗೆ ವಿರುದ್ಧವಾಗಿ. ರೈತರು ತೆಂಗಿನ ಮರದಿಂದ ನೀರಾ ತೆಗೆಯುವುದನ್ನು ಕರ್ನಾಟಕ ರಾಜ್ಯ ರೈತ ಸಂಘದ ಕೆಲವರು ನೀರಾ ಚಳುವಳಿಯನ್ನು ಪ್ರಾರಂಭಿಸಿದರು.

ಇದರಿಂದಾಗಿ ಅಬಕಾರಿ ಅಧಿಕಾರಿಗಳು ಕಂದಾಯ ಮತ್ತು ಪೊಲೀಸ್ ಸಿಬ್ಬಂದಿಗಳ ಸಹಾಯ ಪಡೆದು ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ಕಾನೂನು ಬಾಹಿರವಾಗಿ ನೀರಾ ತೆಗೆಯುತ್ತಿದ್ದವರ ವಿರುದ್ಧ ಕ್ರಮ ತೆಗೆದುಕೊಂಡಿದ್ದಾರೆ. ಕಾನೂನು ಬಾಹಿರವಾಗಿ ನೀರಾ ತೆಗೆಯುತ್ತಿದ್ದ ರೈತರ ವಿರುದ್ಧ 40 ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಅಬಕಾರಿ ಇಲಾಖೆ ಕ್ರಮ ತೆಗೆದು ಕೊಂಡಿರುವುದಕ್ಕೆ ತಡೆಯುಂಟು ಮಾಡಿ ಹಲ್ಲೆ ನಡೆಸಿದ ಆರೋಪಗಳ ಮೇಲೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಎರಡು ಪ್ರಕರಣಗಳನ್ನು ದಾಖಲಿಸಲಾಗಿದೆ.

ಅಬಕಾರಿ ಇಲಾಖೆ ತೆಗೆದುಕೊಂಡ ಕ್ರಮದ ವಿರುದ್ಧ ಚಳುವಳಿ ನಿರತ ರೈತರು ಅಬಕಾರಿ ಗುತ್ತಿಗೆದಾರರ ವಾಹನ, ಸರಾಯಿ ಪ್ಯಾಕೇಟ್ ಇತ್ಯಾದಿಗಳನ್ನು ತಡೆ ಹಿಡಿಯಲು ಅಬಕಾರಿ

ಇಲಾಖೆ ಕ್ರಮ ತೆಗೆದುಕೊಂಡಿದೆ. ಈ ಕ್ರಮವನ್ನು ವಿರೋಧಿಸಿ ಲೂಟಿ ಮಾಡಿರುತ್ತಾರೆ. ಈ ಬಗ್ಗೆ ಬಾಣಾವರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 43:2001 ಕಲಂ:143, 144, 147, 148, 341, 506 ಜೊತೆಗೆ 149 ಐಪಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ದಿನಾಂಕ: 26-03-2001 ಸುಮಾರು 50 ಕೆ.ಆರ್.ಆರ್.ಎಸ್. ಸದಸ್ಯರು ಸಾರಾಯಿ ಗುತ್ತಿಗೆದಾರರ ಇನ್ನೊಂದು ವಾಹನವನ್ನು ತಡೆದು ಲೂಟಿ ಮಾಡಿರುತ್ತಾರೆ. ಈ ಕುರಿತು ಬಾಣಾವರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 44:2001 ಕಲಂ:143, 144, 147, 148, 341, 323, 506, 395 ಜೊತೆಗೆ 149 ಐಪಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಮೇಲ್ಕಂಡ ಎರಡು ಪ್ರಕರಣಗಳಲ್ಲಿ ಭಾಗಿಯಾಗಿರುವ 62 ವ್ಯಕ್ತಿಗಳು ದಿನಾಂಕ: 28-03-2001 ರಂದು ತಾಲ್ಲೂಕು ಕಛೇರಿಯ ಮುಂದು ಧರಣಿ ಕುಳಿತಿದ್ದು ಅವರನ್ನು ಬಂಧಿಸಿ ಅರಸಿ ಕೆರೆ ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ದಿನಾಂಕ: 10-04-2001ರ ವರೆಗೆ ಅವರುಗಳನ್ನು ನ್ಯಾಯಾಂಗ ಬಂಧನದಲ್ಲಿ ಇಡಲಾಗಿದೆ.

ಬೈಲಹಳ್ಳಿಯಲ್ಲಿಯೂ ಕೆಲವು ಆರೋಪಿಗಳನ್ನು ಬಂಧಿಸಲು ಪೊಲೀಸರು ಹೋದಾಗ ಗ್ರಾಮದವರು ಪೊಲೀಸರ ಮೇಲೆ ಹಲ್ಲೆ ಮಾಡಿದ್ದರಿಂದ 3 ಜನ ಪೊಲೀಸರಿಗೆ ಗಾಯಗಳಾಗಿರುತ್ತವೆ. ಆದರೂ ಸಹ 4 ಆರೋಪಿಗಳನ್ನು ಬಂಧಿಸಲಾಗಿದೆ. ನಂತರ ಸುಮಾರು 50-60 ಜನರು ಅಕ್ರಮ ಕೂಟ ಸೇರಿ ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ತಡೆದು ಪ್ರಯಾಣಿಕರನ್ನು ಇಳಿಸಿ ಬಸ್ಸಿಗೆ ಬೆಂಕಿ ಹಚ್ಚಿದ ಬಗ್ಗೆ ಕೆ.ಎಸ್.ಆರ್.ಟಿ.ಸಿ. ಡಿಪೋ ಮ್ಯಾನೇಜರ್, ಅರಸೀಕೆರೆ ಇವರು ನೀಡಿದ ದೂರಿನ ಮೇರೆಗೆ ಅರಸೀಕೆರೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಮೇಲ್ಕಂಡ ಮೂರು ಪ್ರಕರಣಗಳಲ್ಲಿ ಭಾಗಿಯಾಗಿರುವ ಒಟ್ಟು 66 ಜನ ಆರೋಪಿಗಳನ್ನು ದಿನಾಂಕ: 28-03-2001 ರಂದು ಬಂಧಿಸಿ, ದಿನಾಂಕ: 10-04-2001ರ ವರೆಗೆ ನ್ಯಾಯಾಂಗ ಬಂಧನದಲ್ಲಿ ಇಡಲಾಗಿದೆ. ಅಕ್ರಮವಾಗಿ ನೀರಾ ತೆಗೆಯುತ್ತಿರುವವರ ಮೇಲೆ ದಾಳಿ ಮುಂದುವರೆದಿದೆ.

ಹಾಸನ ಜಿಲ್ಲಾ ಪೊಲೀಸ್ ಅಧೀಕ್ಷಕರು ಬಿಸ್ಲೇಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ್ದು, ಅದೇ ಭಾಗದಲ್ಲಿ ಕ್ಯಾಂಪ್ ಮಾಡಿರುತ್ತಾರೆ. ಐ.ಜಿ.ಪಿ. ದಕ್ಷಿಣ ವಲಯ, ಮೈಸೂರು ಇವರು ಅರಸೀಕೆರೆಯಲ್ಲಿ ಇದ್ದುಕೊಂಡು ಕಾನೂನು ಮತ್ತು ಶಾಂತಿ ಪಾಲನಾ ವ್ಯವಸ್ಥೆಯನ್ನು ಕಾಪಾಡಲು ಪೂರ್ಣ ಬಂದೋಬಸ್ತ್‌ನ ಮೇಲ್ವಿಚಾರಣೆಯನ್ನು ಮಾಡುತ್ತಿದ್ದಾರೆ.

3.50 ಪಿ.ಎಂ.

ಶ್ರೀ ಡಿ.ವಿ. ಸದಾನಂದಗೌಡ : ಅಧ್ಯಕ್ಷರೆ, ನನ್ನ ಗಮನಕ್ಕೆ ಬಂದಂತೆ, ಇದು ಅಲ್ಲಿರುವ ಅಧಿಕಾರಿವಾರರ ಕುಮ್ಮಕ್ಕಿನಿಂದ ಪೊಲೀಸ್‌ನವರು ಶಾಮೀಲಾಗಿ ಈ ರೀತಿ ಮಾಡಿದ್ದಾರೆ. ಮನೆ ಮನೆಗೆ ನುಗ್ಗಿ ಮಹಿಳೆಯರು ಮಕ್ಕಳಿಗೆ ಹೊಡೆದಿದ್ದಾರೆ, ಗ್ರಾಮದಲ್ಲಿ ಜನರು ಇಲ್ಲದ ರೀತಿಯಲ್ಲಿ ಬೇರೆಡೆಗೆ ಹೋಗಿದ್ದಾರೆಂಬ ಸುದ್ದಿಗಳು ನಮಗೆ ಬಂದಿವೆ. ಮಾನ್ಯ ಗೃಹ ಮಂತ್ರಿಗಳಲ್ಲಿ

ಕೇಳುವುದೇನೆಂದರೆ, ಈ ರೀತಿಯ ಘಟನೆ ತಮ್ಮ ಗಮನಕ್ಕೆ ಬಂದಿದ್ದರೆ, ದಯವಿಟ್ಟು ಜಿಲ್ಲಾಧಿಕಾರಿಗಳಿಂದ ತನಿಖೆ ನಡೆಸಿ ಇದರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವುದು ಸೂಕ್ತವೆಂದು ತಮ್ಮಲ್ಲಿ ಏನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಅಂತಹದೇನಾದರೂ ನಡೆದಿದ್ದಲ್ಲಿ, ಡಿ.ಸಿ. ಯವರಿಂದ ವರದಿ ತರಿಸಿಕೊಳ್ಳುವ ಅವಶ್ಯಕತೆ ಇದ್ದರೆ ಖಂಡಿತಾ ತರಿಸಿಕೊಳ್ಳಲಾಗುವುದು.

ಶ್ರೀ ಜೆ.ವಿ. ಸಿದ್ದಪ್ಪ : ಆ ಗ್ರಾಮಕ್ಕೆ ನಿನ್ನೆ ನಾನೆ ಹೋಗಿದ್ದೇನೆ, ಅಂತಹ ಘಟನೆ ಯಾವುದು ಆಗಿಲ್ಲ. ಎಸ್.ಪಿ.ಯವರ ಜೊತೆಯಲ್ಲಿ ಬೆಳಿಗ್ಗೆ 7 ಗಂಟೆಗೆ ಹೋಗಿ ರಾತ್ರಿ 11 ಗಂಟೆಯವರೆಗೆ ಇದ್ದೆ, ಹೆಣ್ಣು ಮಕ್ಕಳು ಪೊಲೀಸ್‌ನವರನ್ನು ಹೊಡೆಯಲು ಬಂದರೆ ಹೊರತು ಪೊಲೀಸ್‌ನವರು ಯಾವ ರೀತಿಯ ದೌರ್ಜನ್ಯವನ್ನೂ ಮಾಡಿಲ್ಲ. ಪೊಲೀಸ್‌ನವರು ಅರಸಿಕೆರೆಗೆ ಬಂದಾದ ಮೇಲೆ ಬಸ್ ಅನ್ನು ಸುಡಲಾಗಿದೆಯೇ ಹೊರತು ಅವರು ಅಲ್ಲಿರುವಾಗ ಸುಟ್ಟಿಲ್ಲ. ಬಸ್‌ನಿಂದ ಇಳಿದ ಹೆಣ್ಣುಮಕ್ಕಳು ಹಾಗೂ ಇತರ ಇಂತಿಂಥವರ ಬಸ್ ಅನ್ನು ಸುಟ್ಟಿದ್ದಾರೆಂದು ದೂರನ್ನು ಕೊಟ್ಟಿದ್ದಾರೆ, ಇವತ್ತು ಸಂಜೆ ದಸ್ತಗಿರಿ ಮಾಡುವ ಹಂತದಲ್ಲಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಗಲಾಟೆ ನಿಮ್ಮ ಸಮಕ್ಷಮದಲ್ಲಿ ಆಗಿರುವುದೇ?

ಶ್ರೀ ಜೆ.ವಿ. ಸಿದ್ದಪ್ಪ : ಗಲಾಟೆಯಾದ ಮೇಲೆ ಹೋದೆನು, ಆ ಹಳ್ಳಿಯಲ್ಲಿರುವ ಜನರೆಲ್ಲಾ ನಮ್ಮವರೆ.

(7) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆ.

(ಅ) ಮಾನ್ಯ ಸದಸ್ಯರಾದ ಶ್ರೀ ಬಿ. ಸೋಮಶೇಖರ್ ರವರ ಮೇಲೆ ವಿಧಾನ ಪರಿಷತ್ತಿನಲ್ಲಿ ಮಾಡಿರುವ ಆರೋಪಗಳ ಬಗ್ಗೆ.

+ಶ್ರೀ ಬಿ. ಸೋಮಶೇಖರ್ : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ: 21-3-2001 ರಂದು ವಿಧಾನ ಪರಿಷತ್ತಿನಲ್ಲಿ ಆ ಸದನದ ಒಬ್ಬ ಸದಸ್ಯರು ಪ್ರಶ್ನೆಯನ್ನು ಹಾಕಿ ವೈಯಕ್ತಿಕವಾಗಿ ನನ್ನ ಹೆಸರನ್ನು ಉಲ್ಲೇಖ ಮಾಡಿ ಇಲ್ಲದ ಸಲ್ಲದ ಆರೋಪಗಳನ್ನು ಮಾಡಿ, ಆ ಬಗ್ಗೆ ದೀರ್ಘವಾಗಿ ಚರ್ಚೆಯಾಗಿ ಆ ಬಗ್ಗೆ ಸಹಕಾರ ಮಂತ್ರಿಗಳು ಸಿಓಡಿ ತನಿಖೆ ಮಾಡುತ್ತೇನೆಂದು ಹೇಳಿರುವುದು ಇವತ್ತು ಪತ್ರಿಕೆಗಳೆಲ್ಲಾ ನನ್ನ ಚಾರಿತ್ರವಧೆ ಮಾಡುವ ರೀತಿಯಲ್ಲಿ ಬಂದಿದೆ. ಅದಾದ ನಂತರ ಆ ವಿಚಾರವನ್ನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದಕ್ಕೆ ಇವತ್ತು ಆ ಒಂದು ಅವಕಾಶವನ್ನು ಒದಗಿಸಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ನನ್ನ ವೈಯಕ್ತಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆ ಸದನದಲ್ಲಿ ಸಹಕಾರ ಮಂತ್ರಿಗಳು ಇವತ್ತು ಉತ್ತರ ಕೊಟ್ಟಿದ್ದಾರೆ, ಇಲ್ಲಿ ಚರ್ಚೆಯಾಗುವಂತಹ ಸಂದರ್ಭದಲ್ಲಿ ಸಹಕಾರ ಸಚಿವರು ಸದನದಲ್ಲಿದ್ದರೆ ಚೆನ್ನಾಗಿರುತ್ತದೆ, ಅವರನ್ನು ಕರೆಯಿಸಬೇಕು, ಈ ಬಗ್ಗೆ ಅಧ್ಯಕ್ಷರು, ನಿನ್ನೆ ಮೊನ್ನೆಯೇ ಅವರಿಗೆ ಹೇಳಿದ್ದಾರೆ, ಸಹಕಾರ ಮಂತ್ರಿಗಳು ಬಂದು ಸ್ವಲ್ಪ ಸಹಕಾರ ಮಾಡಬೇಕು, ಇದು ನನ್ನ ಒಬ್ಬನ ಪ್ರಶ್ನೆಯಲ್ಲ, ನಾಳೆ ಇವರ ಮೇಲೂ ಬರಬಹುದು.